ದಿನಾಂಕಃ **23-11-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಟಿ ಜಿ ಎಸ್ ವಕೀಲರಿಂದಃ

ನಾನು ನರ್ಸಿಂಗ್ ಕೋರ್ಸ ವರೆಗೂ ವ್ಯಾಸಂಗವನ್ನು ಮುಗಿಸಿರುತ್ತೇನೆ. ನಾನು ಎಲ್ಲೂ ಕೆಲಸ ಮಾಡುತ್ತಿಲ್ಲ. ನಾನು ತಿಪಟೂರು ತಾಲೂಕು ಐಯನಬಾವಿಯಲ್ಲಿ ವಾಸವಾಗಿರುತ್ತೇನೆ. ನನ್ನ ತಾಯಿ ಹಾಗೂ ತಂದೆಯ ಮನೆಯೂ ಕೂಡ ಐಯನಬಾವಿಯಲ್ಲೇ ಇದೆ. ನಾನು ದಿಃ 15-02-2021 ರಂದು 1 ನೇ ಎದುರುದಾರರ ಜೊತೆ ಮದುವೆಯನ್ನು ಆಗಿರುತ್ತೇನೆ. ಕಮಲಮ್ಮ ಬಸಪ್ಪ ಕಲ್ಯಾಣ ಮಂಟಪದಲ್ಲಿ ಮದುವೆ ಆಗಿರುತ್ತದೆ. ಮದುವೆಯ ಮುಂಚೆ ನ ಮ್ಮ ಇಬ್ಬರ ಕುಟುಂಬಗಳು ಒಬ್ಬರೊಬ್ಬರ ಮನೆಗೆ ಹೋಗಿ ಮಾತುಕತೆ ಆಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿ. ನಾವು ಮದುವೆಯಾಗುವ ಮುಂಚಿತವಾಗಿ ಒಬ್ಬರೊಬ್ಬರನ್ನು ಪರಸ್ಪರ ಅರ್ಥಮಾಡಿಕೊಂಡು ಹಾಗೂ ತಿಳಿದುಕೊಂಡು ಮದುವೆ ಆಗಿರುತ್ತೇವೆ ಎಂದರೆ ಸರಿ. ಮದುವೆಯ ನಂತರ ನಾವು ಕಡೂರು ತಾಲೂಕಿನ ಲಕ್ಷ್ಮೀಪುರ ಗ್ರಾಮದಲ್ಲಿ ಜೀವನವನ್ನು ಪ್ರಾರಂಭಮಾಡಿಕೊಂ ಡು ಹೋದೆವು. ಮದುವೆಯಾದ ನಂತರ ನಾವು ಲಕ್ಷ್ಮೀಪುರದಲ್ಲಿ ವಾಸವಿದೀವಿ . 1 ನೇ ಎದುರುದಾರರು ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಚೈತನ್ಯ ಆಸ್ಪತ್ರೆ ಕಡೂರಿನಲ್ಲಿ ಕೆಲಸ ಮಾಡಿಕೊಂಡು ಇದಾರೆ. 1 ನೇ ಎದುರುದಾರರ ಜೊತೆಯಲ್ಲಿ ಅವರ ತಾಯಿ ಹಾಗೂ ಮತ್ತೊಬ್ಬ ದಿವ್ಯ ಎಂಬ ಹೆಸರಿನ ಹುಡುಗಿ ವಾಸಮಾಡಿಕೊಂಡು ಇದ್ದಾರೆ. ನಾವು 7 ತಿಂಗಳುಗಳ ಕಾಲ ಲಕ್ಷ್ಮೀಪುರದಲ್ಲಿ ವಾಸವಿದ್ದೆವು. ನಂತರ ನನಗೆ ಮಗು ಆದ ಮೇಲೆ 2 ತಿಂಗಳಿಗೆ ತವರು ಮನೆಯಿಂದ ಪುನಃ ಗಂಡನ ಮನೆಗೆ ಬಂದಿರುತ್ತೇನೆ. 9 ತಿಂಗಳ ಕಾಲ ನಾನು ನನ್ನ ತಾಯಿ ಮನೆಯಲ್ಲೇ ಇದ್ದೆ. ದಿಃ 04-01-2022 ರಂದು ನನ್ನ ಮಗು ಜನನವಾಗಿರುತ್ತದೆ. ನಾನು ದಿಃ 16-12-2023 ರಂದು ನನ್ನ ಗಂಡನ ಮನೆಯಿಂದ ತಾಯಿ ಮನೆಗೆ ಬಂದಿರುತ್ತೇನೆ. ಅಲ್ಲಿಂದ ಸುಮಾರು 9 ತಿಂಗಳುಗಳ ಕಾಲ ನನ್ನ ತಾಯಿಯ ಮನೆಯಲ್ಲೇ ಇದ್ದೆ. ಸೆಪ್ಟಂಬರ್ 2024 ರಂದು ನಾನು ಗಂಡನ ಮನೆಗೆ ಹೋಗಿ ಪುನಃ ನನ್ನ ತವರು ಮನೆಗೆ ಬಂದಿರುತ್ತೇನೆ. ನಾನು ಕೇವಲ 1 ದಿನಗಳ ಕಾಲ ನನ್ನ ಗಂಡನ ಮನೆಯಲ್ಲಿ ಇದ್ದು ನಂತರ ವಾಪಾಸ್ಸು ಬಂದಿರುತ್ತೇನೆ. ಇಂದಿಗೂ ಕೂಡ 1 ನೇ ಎದುರುದಾರರು ನನ್ನ ಹಾಗೂ ನನ್ನ ಮಗುವನ್ನು ಪುನಃ ಅವರ ಮನೆಗೆ ಜೀವನ ನಡೆಸಲೆಂದು ಕರೆಯುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ಮತ್ತೊಬ್ಬ ಹುಡುಗಿಯ ಜೊತೆ ಸಂಬಂಧ ಇಟ್ಟುಕೊಂಡಿರುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ ಅದನ್ನು ಅವರು ಒಪ್ಪಿ ಕೊಳ್ಳುತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 24-10-2023 ರಂದು ನಾನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದೂರನ್ನು ಕೈಬರವಣಿಗೆಯಲ್ಲಿ ನೀಡಿರುತ್ತೇನೆ. ಸದರಿ ದೂರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ದೂರನ್ನು ನೀಡಿದ ಬಳಿಕ

ಎದುರುದಾರರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಕರೆಸಿ ವಿಚಾರಣೆಯನ್ನು ಮಾಡಿರುತ್ತಾರೆ. ಅವರು ವಿಚಾರಣೆಯಲ್ಲಿ ನಾನು ಹಾಗೂ ಎದುರುದಾರರು ಒಟ್ಟಾಗಿ ತಿಪಟೂರಿನಲ್ಲಿ ಬೇರೆ ಮನೆ ಮಾಡಿಕೊಂಡು ಇರುವುದಾಗಿ ಹೇಳಿರುತ್ತಾರೆ. ಅದಕ್ಕೆ ನಾನು ಸಹಿಗಳನ್ನು ಮಾಡಿರುತ್ತೇನೆ. ಸಂರಕ್ಷಣಾ ಅಧಿಕಾರಿಗಳು ಎಂದಿಗೂ ಕಡೂರಿಗೆ ಬಂದು ವಿಚಾರಣೆಯನ್ನು ನಡೆಸಿರುವುದಿಲ್ಲ. ಸದರಿ ಇಲಾಖೆಯವರು ನಾನು ನೀಡಿದಂತಹ ಮಾಹಿತಿಯ ಮೇರೆಗೆ ವರದಿಯನ್ನು ನೀಡಿರುತ್ತಾರೆ ಎಂದರೆ ಸರಿ. ಅವರು 16 ಪುಟದ ವರದಿಯನ್ನು ನೀಡಿದ್ದಾರೆ. ಸದರಿ ವರದಿಯು ಬರವಣಿಗೆಯ ಮುಖಾಂತರ ನೀಡಿರುತ್ತಾರೆ. ಸದರಿ ವರದಿಯನ್ನು ಮಾಡುವಂತಹ ಸಮಯದಲ್ಲಿ ನಾನು ಮಾತ್ರ ಅಲ್ಲಿ ಹಾಜರಿದ್ದೆ 1 ನೇ ಎದುರುದಾರರು ಇರಲಿಲ್ಲ. ಸದರಿ ವರದಿಯನ್ನು ಮಾಡುವ ಮುಂಚಿತವಾಗಿ ಎದುರುದಾರರು ಹಾಗೂ ಅವರ ತಂದೆ ತಾಯಿಯರನ್ನು ಕರೆಸಿ ವಿಚಾರಣೆಯನ್ನು ಮಾಡಿರುತ್ತಾರೆ. ನನ್ನ ಮಗವಿನ ಶ್ರೇಯಸ್ ಚಂದ್ರ. ನಾನು 2 ಪುಟದ ದೂರನ್ನು ಬರೆದಿರುತ್ತೇನೆ. ಸದರಿ 16 ಪುಟದ ವರದಿಯಲ್ಲಿ ಇರುವ ಎಲ್ಲಾ ಪುಟಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಸಹಿಯನ್ನು ಎಲ್ಲಾ 16 ಪುಟಗಳಲ್ಲಿ ತೆಗೆದುಕೊಂಡಿರುವುದಿಲ್ಲ ಆರದೆ ಕೊನೆಯ 2 ಪುಗಳಿಗೆ ಮಾತ್ರ ಪಡೆದುಕೊಂಡಿರುತ್ತಾರೆ ನಾನು ಎದುರುದಾರರಿಗೆ ವರದಕ್ಷಿಣೆಯೆಂದು ವಡವೆ ಹಾಗೂ ವಡವೆಗಳನ್ನು ನೀಡಿರುತ್ತೇನೆ ಆದರೆ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ವಡವೆಗಳನ್ನು ಮಾಡಿಸುವುದರ ದಾಖಲಾತಿಗಳು ನನ್ನ ಬಳಿ ಇದೆ. ಅದನ್ನು ನಾನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರಿಗೆ ನೀಡಿರುವುದಿಲ್ಲ. ನಾನು ನನ್ನ ದೂರಿನಲ್ಲಿ ಹೇಳಿರುವ ಹಾಗೆ ಎದುರುದಾರರ ಜೊತೆ ಲಕ್ಷ್ಮೀಪುರದಲ್ಲಿ ವಾಸವಿದ್ದಂತಹ ಸಮಯದಲ್ಲಿ ನನಗೆ ದೈಹಿಕ ಹಾಗೂ ಮನಾಸಿಕವಾಗಿ ತೊಂದರೆಯನ್ನು ನೀಡಿದ್ದು ಅದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿನ ಸ್ಥಳೀಯ ಇಲಾಖೆ ಅಥವಾ ಪೊಲೀಸ್ ಠಾಣೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಆದರೆ ನಾನು ತಿಪಟೂರಿನಲ್ಲಿ ಬಂದು ದೂರನ್ನು ದಾಖಲಿಸಿರುತ್ತೇನೆ. ನಾನು ಸುಮಾರು 9 ತಿಂಗಳ ನಂತರ ದೂರನ್ನು ನೀಡಿರುತ್ತೇನೆ. 1 ನೇ ಎದರುದಾರರು ಈಗ ಲಕ್ಷ್ಮೀಪುರದಲ್ಲೇ ವಾಸವಿದ್ದಾರೆ. ಪ್ರತಿ ವಾರಿಯೂ 1 ನೇ ಎದುರುದಾರರು ಬಂದಾಗಲೆಲ್ಲ ನನ್ನನ್ನು ಅವರೊಂದಿಗೆ ಲಕ್ಷ್ಮೀಪುರದಲ್ಲಿ ವಾಸಮಾಡಿಕೊಂಡು ಇರುವಂತೆ ಕೋರುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಕೇವಲ 2 ಬಾರಿ ಮಾತ್ರ ನನ್ನನ್ನು ಅವರೊಂದಿಗೆ ಬರುವಂತೆ ಕೋರಿಕೊಂಡಿರುತ್ತಾರೆ. ನಾನು ನೀಡಿರುವಂತಹ ದೂರಿಗೆ ಸಂಬಂಧಪಟ್ಟ ಹಾಗೆ ಎದುರುದಾರರು ಯಾವ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎದುರುದಾರರು ನನ್ನಿಂದ ವರದಕ್ಷಿಣೆ ರೂಪದಲ್ಲಿ ಹಣ ಹಾಗೂ ವಡವೆಯನ್ನು ನಾನು ದೂರಿನಲ್ಲಿ ನಮೂದಿಸಿದ ಹಾಗೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವ ಹಾಗೆ ಅವರು ಬೇರೆ ಯಾವ ಹುಡುಗಿಯ ಜೊತೆಯನ್ನು ಸಂಬಂಧವನ್ನು ಇಟ್ಟುಕೊಂಡಿಲ್ಲ ಎಂದರೆ

ಸರಿಯಲ್ಲ. ನಾನು ಎದುರುದಾರರ ಮೇಲೆ ಅನುಮಾನವನ್ನು ಪಟ್ಟು ಕೊಂಡು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದೂರಿನಂತೆ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಾನು ನೀಡಿರುವಂತಹ ದೂರಿನ ಮೇರೆಗೆ ಲಕ್ಷ್ಮೀಪುರದಲ್ಲಿರುವಂತಹ ಅಕ್ಕಪಕ್ಕದ ಮನೆಯನ್ನು ಬಂದು ತನಿಖೆ ಮಾಡಿರುತ್ತಾರೆ. ಇಲ್ಲಿಂದ 2 ತಿಂಗಳ ಹಿಂದೆ ಇಲಾಖೆಯವರು ಬಂದು ತನಿಖೆಯನ್ನು ನಡೆಸಿರುತ್ತಾರೆ. ಅವರು ಅಲ್ಲಿ ಮಹಜರ್ ಹಾಗೂ ಅಕ್ಕಪಕ್ಕದ ಮನೆಯವರ ಸಹಿಗಳನ್ನು ಪಡೆದುಕೊಂಡು ಬಂದಿರುವುದಿಲ್ಲ. ನಾನು ಎದುರುದಾರರ ಜೊತೆ ಜೀವನವನ್ನು ನಡೆಸುವ ಇಚ್ಛೆ ಇಲ್ಲದ ಕಾರಣ ಅವರ ವಿರುದ್ಧ ಈ ದೂರನ್ನು ತೆಗೆದುಕೊಂಡು ಬಂದು ವಿಚ್ಛೇಧನವನ್ನು ನೀಡುವ ಉದ್ದೇಶದಿಂದ ಅವರಿಗೆ ತೊಂದರೆಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವೈವಾಹಿಕ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಕಡೂರಿನಲ್ಲಿ ಒಂದು ಎಂ ಸಿ ಸಂಖ್ಯೆ 66/2024 ದಾಖಲಾಗಿತ್ತು ಎಂದರೆ ಸರಿ. ಅದರಂತೆ ನ್ಯಾಯಾಲಯವು ನಾನು ಅರ್ಜಿದಾರರ ಜೊತೆಗೆ ಹೋಗಿ ಜೀವನವನ್ನು ನಡೆಸುವಂತೆ ಆದೇಶವು ಆಗಿತ್ತು ಎಂದರೆ ಸರಿ. ನಾನು ನೀಡಿರುವಂತಹ ದೂರಿನ ಮೇರೆಗೆ ಎದುರುದಾರರು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಲಾಭವನ್ನು ಹೊಂದಬೇಕು ಎಂಬ ಕಾರಣದಿಂದ ಈ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.